## ‘ಕಲೆಗೆ ಗೌರವ ಸಿಕ್ಕೈತಿ...’

ಮನೆಯಲ್ಲಿ ದಿನದ ಒಂದಷ್ಟು ಗಂಟೆಗಳ ಕಾಲ ನಿತ್ಯ ಗೊಂಬೆಗಳ ಜೊತೆ ಆಟವಾಡುವ ಭೀಮವ್ವ ಅವರಿಗೆ ಈಗ ಪದ್ಮಶ್ರೀ ಪ್ರಶಸ್ತಿ ದೊರಕಿರುವುದು ಹುಮ್ಮಸ್ಸನ್ನು ಹೆಚ್ಚಿಸಿದೆ. ಪ್ರಶಸ್ತಿ ಘೋಷಣೆಯಾದ ಬಳಿಕ ಅಜ್ಜಿಯ ಕೈಯಲ್ಲಿ ಕುಣಿಯುವ ಗೊಂಬೆಗಳ ದೃಶ್ಯಾವಳಿ ಕಣ್ತುಂಬಿಕೊಳ್ಳಲು ಜನ ಮೋರನಾಳ ಗ್ರಾಮಕ್ಕೆ ಬರುತ್ತಿದ್ದಾರೆ. ಅವರನ್ನೆಲ್ಲ ನೋಡುವ ಅಜ್ಜಿ ‘ನೀವು ನನ್ನ ನೋಡೋಕೇ ಬರ್ತೀರೇನು? ನನಗೆ ಗೊತ್ತಿರುವ ಕಲೆಗೆ ಬೆಲೆ ಕೊಟ್ಟು ಬರ್ತೀರಿ. ಹಾಗೆಯೇ ಪದ್ಮಶ್ರೀ ಪ್ರಶಸ್ತಿ ಕಲೆಗೆ ಸಿಕ್ಕ ಗೌರವ’ ಎಂದು ಹೇಳುತ್ತಾಳೆ.

‘ಕಲೆ ಹಾಗೂ ಕಲಾವಿದರು ಉಳಿಯಬೇಕು ಎಂದು ಎಲ್ಲರೂ ಹೇಳುತ್ತಾರೆ. ಆದರೆ ಬಹಳಷ್ಟು ಕಲಾವಿದರಲ್ಲಿ ಸಾಮಗ್ರಿಗಳೇ ಇಲ್ಲ. ಸರ್ಕಾರ ಅವುಗಳನ್ನು ಕೊಟ್ಟರೆ ಹೊಸಬರಿಗೂ ಹೇಳಿಕೊಡಬಹುದು. ನಶಿಸಿ ಹೋಗುವ ಆತಂಕವಿರುವ ಕಲೆಗಳನ್ನು ಉಳಿಸಬಹುದು. ಇದು ಕಲಾವಿದರಿಗೆ ಸರ್ಕಾರ ಕೊಡುವ ಗೌರವವೆಂದೇ ಭಾವಿಸಿದ್ದೇನೆ’ ಎಂದು ಭೀಮವ್ವ ಕೈ ಮುಗಿದು ಹೇಳಿದರು.



ಮಹಾಕಾವ್ಯಗಳನ್ನು ಹಾಗೂ ಪ್ರಸ್ತುತ ವಿದ್ಯಮಾನಗಳನ್ನು ತೊಗಲುಗೊಂಬೆಯಾಟದ ಮೂಲಕ ಪ್ರದರ್ಶನ ನೀಡಿದ್ದಾರೆ. ಗೊಂಬೆಗಳ ಲಯಕ್ಕೆ ತಕ್ಕಂತೆ ಹಾಡುಗಳನ್ನು ಹೊಂದಿಸುವುದು ಭೀಮವ್ವನಿಗೆ ಕರಗತವಾಗಿದೆ.

ಅಜ್ಜಿಯ ಸಾಧನೆಗೆ 1993ರಲ್ಲಿ ತೆಹ್ರಾನ್ ಬೊಂಬೆ ಉತ್ಸವ ಪ್ರಶಸ್ತಿ, 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗೌರವ, 2005–06ನೇ ಸಾಲಿನಲ್ಲಿ ಜಾನಪದ ಮತ್ತು ಬಯಲಾಟ ಅಕಾಡೆಮಿ ಪ್ರಶಸ್ತಿ, 2022ರಲ್ಲಿ ಹಿರಿಯ ನಾಗರಿಕರ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ– ಹೀಗೆ ಸಂಘ ಸಂಸ್ಥೆಗಳಿಂದ ಅನೇಕ ಪುರಸ್ಕಾರಗಳು ಲಭಿಸಿವೆ.

ತೊಗಲುಗೊಂಬೆ ಆಡಿಸುವುದು ಒಂದೆಡೆಯಾದರೆ, ಗೊಂಬೆಗಳನ್ನು ಸೂಕ್ಷ್ಮವಾಗಿ ತಯಾರಿಸುವ ಅಜ್ಜಿಯ ಕೌಶಲವೂ ಗಮನಸೆಳೆಯುತ್ತದೆ. ಬಣ್ಣ ತಯಾರಿಸುವುದು, ಜಿಂಕೆಯ ಚರ್ಮವನ್ನು ಹದ ಮಾಡುವುದು ಹೀಗೆ ಕಲೆಯ ಎಲ್ಲ ಕೌಶಲಗಳು ಅಜ್ಜಿಗೆ ಕರಗತವಾಗಿವೆ. ಒಂಬತ್ತು ದಶಕಗಳಿಂದ ರಾಜ್ಯ, ಹೊರರಾಜ್ಯ ಹಾಗೂ ವಿದೇಶಗಳಲ್ಲಿ ಗೊಂಬೆಗಳು ಕುಣಿಯುವಂತೆ ಮಾಡಿರುವ ಅಜ್ಜಿಗೆ ಈಗ ಬದುಕಿನಲ್ಲಿ ದೊಡ್ಡ ಖುಷಿ ಸಿಕ್ಕಿದೆ.

ವಿದ್ಯುತ್ ದೀಪದ ಮಂದ ಬೆಳಕಿನಲ್ಲಿ ಕುಣಿಯುವ ಗೊಂಬೆಗಳು ಆಕರ್ಷಕವಾಗಿ ಕಾಣುವುದು ಅವುಗಳಿಗೆ ಬಳಿಯುವ ಬಣ್ಣಗಳಿಂದ. ಗೊಂಬೆಗಳನ್ನು ತಯಾರಿಸುವವರು ಭೀಮ, ದುರ್ಯೋಧನ, ರಾವಣರಂತಹ ಪಾತ್ರಗಳಿಗೆ ಸಾಮಾನ್ಯವಾಗಿ ಕೆಂಪು, ಕಪ್ಪು ಬಣ್ಣ ಬಳಿಯುತ್ತಾರೆ. ಸ್ತ್ರೀ ಪಾತ್ರದ ಗೊಂಬೆಗಳಲ್ಲಿ ರಾಣಿಯರಿಗೆ ಉಚಿತವಾದ ವೇಷಭೂಷಣಗಳಿಂದ ಕೂಡಿದ ಗೊಂಬೆಗಳು ಹಾಗೂ ಸಾಮಾನ್ಯ ವರ್ಗದ ಗೊಂಬೆಗಳನ್ನು ತಯಾರಿಸಿ ಸನ್ನಿವೇಶ ಹಾಗೂ ಪಾತ್ರಕ್ಕೆ ತಕ್ಕಂತೆ ಕುಣಿಸುತ್ತಾರೆ. ಗೊಂಬೆಯಾಟದ ಸ್ತ್ರೀ ಪಾತ್ರಗಳಲ್ಲಿ ಉದ್ದನೆಯ ಮೂಗು, ಅಗಲ ಕಣ್ಣು, ಬೈತಲೆ ತೆಗೆದು ಕಟ್ಟಿದ ತುರುಬು, ಕಿವಿಗೆ ಆಭರಣ, ಮೂಗಿಗೆ ಮೂಗುತಿ ಹಾಗೂ ಬುಲಾಕು, ಕೈಬಳೆ – ಹೀಗೆ ಸಾಂಪ್ರದಾಯಿಕ ಹೆಣ್ಣಿನ ಚಿತ್ರಣವನ್ನು ಅರಳಿಸಲಾಗಿರುತ್ತದೆ. ಗೊಂಬೆ ಕುಣಿಸುವವರ ಕೌಶಲ ಮತ್ತು ಗೊಂಬೆಗಳ ಅಂದವೇ ಆಟದ ಸೊಬಗು ಹೆಚ್ಚಿಸುತ್ತದೆ.

ವಿರಾಟ ಪರ್ವ, ಲವಕುಶ, ಕಾಳಗ, ಕರ್ಣಪರ್ವ, ದ್ರೌಪದಿ ವಸ್ತ್ರಾಪಹರಣ, ಆದಿಪರ್ವ, ಸರ್ಪಪರ್ವ – ಹೀಗೆ ಅನೇಕ ಪ್ರಸಂಗಗಳನ್ನು ಭೀಮವ್ವ ಸರಾಗವಾಗಿ ಹೇಳುತ್ತಾರೆ. ಮೊದಲಿನಿಂದಲೂ ಉತ್ಸವಗಳಲ್ಲಿ ತೊಗಲುಗೊಂಬೆ ಆಡಿಸಲಾಗುತ್ತದೆ. ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಮಳೆ ಬರದೆ ಹೋದಾಗ ಗೊಂಬೆಯಾಟ ಆಡಿಸಿದರೆ ಮಳೆ ಬರುತ್ತದೆ ಎಂಬ ನಂಬಿಕೆ ಜನರಲ್ಲಿದೆ.

### ತಲೆಮಾರಿನಿಂದ ತಲೆಮಾರಿಗೆ...

ಒಂಬತ್ತು ದಶಕಗಳಿಂದ ಗೊಂಬೆಗಳನ್ನು ಆಡಿಸುವಲ್ಲಿ ನಿಷ್ಣಾತರಾದ ಭೀಮವ್ವ ಶಿಳ್ಳೇಕ್ಯಾತರ ಈ ಕಲೆಯನ್ನು ತಮ್ಮ ಕುಟುಂಬದವರಿಗೂ ಹೇಳಿಕೊಟ್ಟಿದ್ದಾರೆ. ಇವರ ಕುಟುಂಬದವರಲ್ಲಿ ಸದ್ಯ ಒಂಬತ್ತು ಜನ ಗೊಂಬೆ ಆಡಿಸುವ ಕಲಾವಿದರಿದ್ದಾರೆ. ಇಳಿ ವಯಸ್ಸಿನಲ್ಲಿಯೂ ಅಜ್ಜಿ ತಮ್ಮ ಗಿರಿ ಮೊಮ್ಮಕ್ಕಳಿಗೆ ಗೊಂಬೆಗಳನ್ನು ಆಡಿಸಿ ರಾಮಾಯಣ, ಮಹಾಭಾರತದ ಕಥನಗಳನ್ನು ಹೇಳಿಕೊಡುತ್ತಿದ್ದಾರೆ. ಈ ಅಜ್ಜಿಯ ಪುತ್ರ ಕೇಶಪ್ಪ ಶಿಳ್ಳೇಕ್ಯಾತರ ಕೂಡ ಅಂತರರಾಷ್ಟ್ರೀಯ ಮಟ್ಟದ ಗೊಂಬೆಯಾಟ ಕಲಾವಿದರು. ಈ ಕುಟುಂಬ ಕಲೆಯನ್ನು ಪೋಷಿಸಿ ಮುಂದಿನ ಪೀಳಿಗೆಗೂ ಕೊಂಡೊಯ್ಯುವ ಕೆಲಸ ಮಾಡುತ್ತಿದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸ್ಥಳೀಯ ಸಂಸ್ಕೃತಿ, ಸಂಪ್ರದಾಯಕ್ಕೆ ಅನುಗುಣವಾಗಿ ಗೊಂಬೆ ಆಡಿಸುವ ಪರಂಪರೆ ಈಗಲೂ ಉಳಿದುಕೊಂಡಿದೆ. ಬಹಳಷ್ಟು ಕಲಾವಿದರಲ್ಲಿ ಈಗಲೂ ಆರೇಳು ದಶಕಗಳ ಹಿಂದೆ ತಯಾರಿಸಿದ ಗೊಂಬೆಗಳೇ ಕುಣಿಯುತ್ತಿವೆ. ಅವುಗಳನ್ನು ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡುವ ಅಗತ್ಯವಿದೆ. ಭೀಮವ್ವ ಅಜ್ಜಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿದ್ದು ಗೊಂಬೆ ಕುಣಿಸುವ ಕಲಾ ಪ್ರಕಾರಕ್ಕೆ ಹೊಸ ಆಯಾಮ ಲಭಿಸುವ ಭರವಸೆ ಮೂಡಿದೆ.

ಪ್ರತಿಕ್ರಿಯಿಸಿ: feedback@sudha.co.in